೬.೧ ಲಕ್ಷ ಅರ್ಹ ಕುಟುಂಬಗಳನ್ನು ಯೋಜನೆಯಡಿಯಲ್ಲಿ ತಂದು ಒಟ್ಟು ೩೬.೧೨ ಲಕ್ಷ ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಯಿತು. ಇದಲ್ಲದೆ ಎಲ್ಲಾ ಪ್ಲಾಂಟೇಷನ್ ಕೂಲಿಕಾರರಿಗೂ ಮತ್ತು ಹಿಂದೆ ಪುರಸಭೆಗಳಾಗಿದ್ದು ನಂತರ ಮುಂಡಲ್ ಪಂಚಾಯಿತಿಗಳಾಗಿ ಪರಿವರ್ತನೆಯಾದ ಪ್ರದೇಶಗಳಿಗೂ ಹಸಿರು ಪಡಿತರ ಚೀಟಿಗಳ ಯೋಜನೆಯನ್ನು ವಿಸ್ತರಿಸಿ ಸಧ್ಯದಲ್ಲಿ ಒಟ್ಟು ೩೧.೧೩ ಲಕ್ಷ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಈ ರೀತಿ ಎಲ್ಲಾ ವರ್ಗದವರಿಗೂ ಹಸಿರು ಪಡಿತರ ಚೀಟಿಗಳನ್ನು ವಿತರಿಸಿರುವುದರಿಂದ ಇನ್ನೂ ಲಕ್ಷಾಂತರ ಫಲಾನುಭವಿಗಳಿಗೆ ಹಸಿರು ಪಡಿತರ ಚೀಟಿ ಸಿಕ್ಕದೆ ತೊಂದರೆಯಾಗಿದೆ ಎನ್ನುವುದು ಸತ್ಯಕ್ಕೆ ದೂರವಾಗಿದೆ. ಸಮೀಕ್ಷೆ ಸಮಯದಲ್ಲಿ ಸ್ಥಳದಲ್ಲಿರುವ ಕೆಲವು ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿ ಸಿಗದೆ ಇರುವ ಸಾಧ್ಯತೆ ಇದ್ದು ಅಂತಹ ಕುಟುಂಬಗಳಿಗೆ ಹಸಿರು ಪಡಿತರಚೀಟಿಗಳನ್ನು ನೀಡಲಾಗುತ್ತಿದೆ. ಪ್ರಸ್ತುತ ಎಲ್ಲಾ ಅರ್ಹ ಕುಟುಂಬಗಳಿಗೂ ಹಸಿರು ಪಡಿತರ ಚೀಟಿಗಳನ್ನು ನೀಡಿದ್ದು ರಾಜ್ಯದಲ್ಲಿರುವ ಒಟ್ಟು ಕುಟುಂಬಗಳ ಶೇಕಡ ೩೮.೪ ರಷ್ಟು ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಆದಾಗ್ಯೂ ಕೆಲವು ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳು ಲಭ್ಯವಾಗದೆ ಇರುವುದು ಕಂಡು ಬಂದಲ್ಲಿ ಅವರಿಗೆ ಹಸಿರು ಪಡಿತರ ಚೀಟಿಗಳನ್ನು ನೀಡುವ ಬಗ್ಗೆ ಪರಿಶೀಲಿಸಲಾಗುವುದು.....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ ಸಭೆಯಲ್ಲಿ ಹಾಜರಿರಲಿಲ್ಲ.

ರಾಜಾಜಿನಗರ ಕ್ಷೇತ್ರದ ಸುಬ್ರಹ್ಮಣ್ಯ ಡಿವಿಜನ್‌ನಲ್ಲಿ ಕೆರೆ ಅಂಗಳವನ್ನು ಖಾಸಗೀ ಯವರಿಗೆ ಕೊಟ್ಟಿರುವುದು,

ಶ್ರೀ ಎಂ. ಎಸ್, ಕೃಷ್ಣನ್.—ಸ್ವಾಮಿ ರಾಜಾಜಿನಗರ ಕ್ಷೇತ್ರದ ಸುಬ್ರಹ್ಮಣ್ಯ ಡಿವಿಜನ್‌ನಲ್ಲಿ ಕೆರೆ ಅಂಗಳಗಳ ಸಾರ್ವಜನಿಕರ ಉಪಯೋಗಕ್ಕಾಗಿ ಇದೆ. ಆ ಬಗ್ಗೆ ಮುಖ್ಯಮಂತ್ರಿಗಳೂ ಕೂಡ ಏನು ಹೇಳಿದರು ಎಂದರೆ, ಕೆರೆ ಅಂಗಳವನ್ನು ಬೇರೆ ಯಾವುದಕ್ಕೂ ಉಪಯೋಗಿಸಕೂಡದು, ಖಾಸಗಿಯವರಿಗೂ ಕೊಡಕೂಡದು, ಅದನ್ನು ಸ್ಕೂಲು ಆಥವಾ ಪಾರ್ಕ್ ಆಥವಾ ಆಟದ ಮೈದಾನಕ್ಕಾಗಿ ಮಾತ್ರ ಉಪಯೋಗ ಮಾಡಿಕೊಳ್ಳಬೇಕೆಂದು ಅವರೂ ಸಹ ಸ್ಪಷ್ಟವಾಗಿ ಸರ್ಕಾರದ ಪರವಾಗಿ ಹೇಳಿದ್ದಾರೆ. ಆದರೂ ಸಹ ಆ ಒಂದು ನಿರ್ಧಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮತ್ತು ಬೆಂಗಳೂರು ಸಿಟಿ ಕಾರ್ಪೊರೇಷನ್‌ರವರು ಇಬ್ಬರೂ ಸಹ ಇದನ್ನು ಉಲ್ಲಂಘನೆ ಮಾಡುತ್ತಾ ಬರುತ್ತಿದ್ದಾರೆ. ಒಂದು ಪಕ್ಕದಲ್ಲಿ ಅಂದರೆ ಮಿಲ್ಕ್ ಕಾಲೋನಿ ಇರತಕ್ಕ ಕಡೆ ಒಂದು ಸಣ್ಣ ಜಾಗವನ್ನು ಶ್ರೀ ಶ್ರೀನಿವಾಸ್ ಎಂಬುವರ ಹೆಂಡತಿ ಶ್ರೀಮತಿ ಲಕ್ಷ್ಮಿ ಎಂಬುವರಿಗೆ ಕೊಟ್ಟಿದ್ದಾರೆ. ನಂತರ ಅದರ ಇನ್ನೊಂದು ಕಡೆ ಯಾರೋ ಒಬ್ಬರು ಖಾಸಗಿಯವರು ಒಂದು ಸಣ್ಣ ಜಾಗವನ್ನು ಅಕ್ರಮಣ ಮಾಡಿಕೊಂಡಿದ್ದು ಅದನ್ನು ತೆಗೆಯದೆ ಹಾಗೆ ಇಂಜಕ್ಷನ್ ಆರ್ಡರ್ ತೆಗೆದುಕೊಂಡು ಬಂದಿದ್ದು, ಅದನ್ನು ವಕೇಟ್ ಮಾಡುವುದಕ್ಕೆ ಕಾರ್ಪೊರೇಶನ್‌ನ ಲೀಗಲ್ ಸೆಲ್ ಆಗಲಿ, ಅಥವಾ ಬೇರೆ ಅಧಿಕಾರಿಗಳಾಗಲಿ ಪ್ರಯತ್ನ ಮಾಡುತ್ತಿಲ್ಲ. ಇದರಿಂದ ನನಗೆ ಏನು ತಿಳಿದು ಬರುತ್ತದೆಂದರೆ, ಕಾರ್ಪೊರೇಷನ್ ಹಾಗೂ ಬಿ. ಡಿ. ಎ. ಅಧಿಕಾರಿಗಳು ಇಬ್ಬರೂ ಸೇರಿಕೊಂಡು ಈ ರೀತಿಯಾಗಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಕಾಣುತ್ತದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ತಕ್ಷಣ ಗಮನ ಹರಿಸಿ ಇದನ್ನು ಬಗೆಹರಿಸಬೇಕು. ಆ ಬಗ್ಗೆ ಈ ಕೆಳಗಿನ ಕ್ರಮವನ್ನು ತೆಗೆದುಕೊಳ್ಳಿ ಬೇಕೆಂದು ಒತ್ತಾಯ ಮಾಡುತ್ತೇನೆ.

ಮೊದಲನೆಯದು ಬಿ.ಡಿ.ಎ.ಅವರಿಗೆ ಏನು ಸೈಟನ್ನು ಅಲಾಟ್ ಮಾಡಿದ್ದಾರೆ, ಅದನ್ನು ವಾಪಸ್ಸು ತೆಗೆದುಕೊಂಡು ಕೆರೆ ಅಂಗಳವನ್ನು ಹಾಗೆಯೇ ಉಳಿಸಬೇಕು.

ಎರಡನೆಯದು, ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿರುವ ಲೀಗಲ್ ಸೆಲ್‌ನ್ನು ಇವತ್ತಿನ ದಿವಸ ತರಾಟೆಗೆ ತೆಗೆದುಕೊಂಡು ಇಂಜೆಕ್ಷನ್ ಆರ್ಡರ್‌ನ್ನು ಮೊದಲು ವಾಪಸ್ಸು ತೆಗೆಯುವಂತೆ ಮಾಡಬೇಕು.

ಮೂರನೆಯದು, ಪಾರ್ಕ್ ಮತ್ತು ಪ್ಲೇಗ್ರೌಂಡ್, ಆಟದ ಮೈದಾನಕ್ಕಾಗಿ ಈ ಜಾಗವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸೂಕ್ತ ಕ್ರಮವನ್ನು ತಕ್ಷಣ ತೆಗೆದುಕೊಳ್ಳಿ ಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಇದು ೨ ಖಾತೆಗಳಿಗೂ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ನಾಳೆ ಅದರ ಬಗ್ಗೆ ಉತ್ತರವನ್ನು ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬರವರು ಸಭೆಯಲ್ಲಿ ಹಾಜರಿರಲಿಲ್ಲ.

ಜಮಖಂಡಿಯಲ್ಲಿ ಇಂಗಳಗಾಂವಿ ಎಂಬ ಉಪ ಶಿಕ್ಷಣಾಧಿಕಾರಿಯಿಂದ ಬಡ ಶಿಕ್ಷಕರಿಗೆ ಆಗುತ್ತಿರುವ ಕಿರುಕುಳದ ಬಗ್ಗೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಸನ್ಮಾನ್ಯ ಅಧ್ಯಕ್ಷರೇ, ಜಮಖಂಡಿಯಲ್ಲಿ ಇಂಗಳಗಾಂವಿ ಎಂದ ಉಪ ಶಿಕ್ಷಣಾಧಿಕಾರಿಯಿದ್ದು ಈ ಅಧಿಕಾರಿ ಇಲ್ಲಿಗೆ ಬಂದಾಗಿನಿಂದ ಬಡಶಿಕ್ಷಕರಿಗೆ ಅನೇಕ ರೀತಿಯಿಂದ ತೊಂದರೆ ಕೊಡುತ್ತಿದ್ದು ಈತನ ಭ್ರಷ್ಟಾಚಾರದ ಕುರಿತು ಶಿಕ್ಷಕವರ್ಗ ಬೇಸತ್ತು ಹೋಗಿದೆ. ಈ ಅಧಿಕಾರಿ ಲಂಚದ ಪ್ರತಿಮೂರ್ತಿಯೆಂತಿದ್ದು ಲಂಚಕ್ಕಾಗಿ ಆತನದೇ ಆದ ಒಂದು ರೇಟ್‌ಬೋರ್ಡ್ ಇದೆ. ಶಾಲೆಗಳ ತಪಾಸಣೆ ಮಾಡಲು ಈತ ಹಣ ಹಾಗೂ ಹೆಂಡ ಕೇಳುತ್ತಾನೆ ಈತನ ಮಗ ಎಲ್. ಐ. ಸಿ. ಏಜೆಂಟನಿದ್ದು ಮಗನಿಗೆ ಆತನ ಉದ್ಯೋಗದಲ್ಲಿ ನೆರವಾಗುವಂತೆ ಶಿಕ್ಷಕರ ಮೇಲೆ ಒತ್ತಾಯ ತಂದು ಸುಮಾರು ೫೦ ಲಕ್ಷ ರೂಪಾಯಿಗಳ ವಿಮಾ ಪಾಲಿಸಿ ಮಾಡಿದ್ದಾನೆ. ಯಾರು ಆತನ ಮಗನ ಹತ್ತಿರ ವಿಮಾ ಪಾಲಿಸಿ ಮಾಡಿಸುವುದಿಲ್ಲವೋ ಅಂಥವರಿಗೆ ಹಿಂಸೆ ಕೊಡುತ್ತಿದ್ದಾನೆ. ತನ್ನಿಂದ ಎಲ್.ಐ.ಸಿ. ಪ್ರೀಮಿಯಂ ತೆಗೆದುಕೊಳ್ಳದ ಕಾರಣಕ್ಕಾಗಿ ಆ ಅಧಿಕಾರಿಯ ಮಗ ಬಡಶಿಕ್ಷಕರೊಬ್ಬರ ಮೇಲೆ ಬೀದಿಯಲ್ಲಿ ಗೂಂಡಾಗಿರಿ ಮಾಡಿದ. ಈ ಅಧಿಕಾರಿಯ ಭ್ರಷ್ಟಾಚಾರ ಮತ್ತು ಆತ ಶಿಕ್ಷಣ ವರ್ಗಕ್ಕೆ ಕೊಡುವ ಕಿರುಕುಳದ ವಿರುದ್ಧ ತಾಲ್ಲೂಕ್ ಪ್ರಾಥಮಿಕ ಶಿಕ್ಷಕ ಸಂಘದವರು ಮೇಲಾಧಿಕಾರಿಗಳಿಗೆ ಬರೆದಿದ್ದು ಈ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಆಯುಕ್ತರಿಗೆ ತಿಳಿಸಿದ್ದಾಗಿ ಅವರು ಶಿಕ್ಷಕರ ಸಂಘಕ್ಕೆ ಬರೆದ ಉತ್ತರದಲ್ಲಿ ತಿಳಿಸಿದ್ದಾರೆ. ಈ ವಿಚಾರ ತಿಳಿದ ಮೇಲಂತೂ ಇಂಗಳಗಾಂವಿಯವರ ದಬ್ಬಾಳಿಕೆಗಳು ಮತ್ತಷ್ಟು ಹೆಚ್ಚಿವೆ. ಜಮಖಂಡಿಯಲ್ಲಿ ೪ ವರ್ಷ ಕಳೆದಿರುವ ಈ ಅಧಿಕಾರಿಯನ್ನು ಕೂಡಲೇ ಅಲ್ಲಿಂದ ವರ್ಗಾಯಿಸಬೇಕು. ಮತ್ತು ವರ್ಗಾಯಿಸುವ ಪೂರ್ವದಲ್ಲಿ ಆತ ಮಾಡಿದ ಭ್ರಷ್ಟಾಚಾರದ ಕುರಿತು ವಿಚಾರಣೆ ಮಾಡಿ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಶಿಕ್ಷಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾಡಿರುವ ಆಪಾದನೆಗಳ ಬಗ್ಗೆ ಆದಷ್ಟು ಜಾಗ್ರತೆ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ತಿಳಿಸುತ್ತೇನೆಂದು ಹೇಳುತ್ತೇನೆ.

ಶ್ರೀಯುತರುಗಳಾದ ಕೆ. ಕುಶಾಲ ಹಾಗೂ ಬಿ. ಲಕ್ಕಪ್ಪನವರು ಸಭೆಯಲ್ಲಿ ಹಾಜರಿರಲಿಲ್ಲವಾದ್ದರಿಂದ ಅವರ ನಿಯಮ ೩೫೪ರ ಕೆಳಗಿನ ಚರ್ಚೆಯನ್ನು ತೆಗೆದುಕೊಳ್ಳಲಾಗಲಿಲ್ಲ.

ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿರುವ ಭಾಷಣದಲ್ಲಿ ಕರ್ನಾಟಕ ರಾಜ್ಯದ ಸಹಕಾರಿ ಸಂಘಗಳ ಮೂಲಕ ಮತ್ತು ಸಹಕಾರಿ ಬ್ಯಾಂಕಿನ ಮೂಲಕ ಪಡೆದಿರುವ ರೈತರ ಎಲ್ಲಾ ತರಹದ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ (ದಿನಾಂಕ ೩೦-೬-೧೯೮೮ರ ಒಳಗೆ ಕಟ್ಟುವ ರೈತರು) ಮನ್ನಾ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಸಂಬಂಧಪಟ್ಟ ಸಹಕಾರಿ ಸಂಘಗಳಿಗೆ ರೈತರು ಸಾಲದ ಅಸಲು ಕಟ್ಟಲು ಹೋದಾಗ ಕೇವಲ ಚಕ್ರಬಡ್ಡಿ ಮನ್ನಾ ಮಾಡಿರುವುದಾಗಿ ಹೇಳುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಸ್ಪಷ್ಟ ಸರ್ಕಾರಿ ಆಜ್ಞೆ ಹೋಗಿದೆಯೆ? ಇದೇ ಸೌಲಭ್ಯವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ರೈತರ ಸಾಲಕ್ಕೂ ಅನ್ವಯಿಸುವ ಬಗ್ಗೆ ಸರ್ಕಾರ ಏನಾದರೂ ಯೋಚಿಸಿದೆಯೇ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.